# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.1143/2014

| ಚಾಸಾ | **8** | ಪ್ರಾಸಾ | **4** |
|---|---|---|---|
| ಹೆಸರು | | ಎಸ್ ಹೇಮಂತ್ ಕುಮಾರ್ | |
| ತಂದೆಯ ಹೆಸರು | | ಕೆ ಶಿವಕುಮಾರ್ | |
| ವಯಸ್ಸು | | **42**ವರ್ಷಗಳು | |
| ಉದ್ಯೋಗ | | ಪೊಲೀಸ್ ಇನ್ಸ್ಪೆಕ್ಟರ್, ಬೇಸ್ಕಾಂ ಜಾಗೃತ ದಳ ರಾಮನಗರ | |
| ವಿಳಾಸ | | ಬೆಂಗಳೂರು | |

ದಿನಾಂಕ**.27.10.2025**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**.**

**ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ನಾನು ಜೂನ್ **2014** ರಿಂದ ಜುಲೈ **2015** ರವರೆಗೂ ನಾನು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ**.**

ದಿಃ**18.07.2014** ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ**-7** ರವರಿಂದ ಪಡೆದುಕೊಂಡು ಪರಿಶೀಲಿಸಿ ಮುಂದುವರೆದ ತನಿಖೆಯನ್ನು ಕೈಗೊಂಡಿರುತ್ತೇನೆ**.**

ಆದೇ ದಿನ ನಮ್ಮ ಠಾಣೆಯ ಸಿಬ್ಬಂದಿಯಾದ ಪಿಸಿ-161 ರವರು ನ್ಯಾಯಾಲಯದಿಂದ ಆರೋಪಿತರು ಜಾಮೀನು ಪಡೆದುಕೊಂಡ ಬಗ್ಗೆ ನನಗೆ ಮಾಹಿತಿ ನೀಡಿರುತ್ತಾರೆ.

ದಿನಾಂಕ.19.07.2014ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಪಂಚರಾದ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 11.00 ರಿಂದ 11.45ರ ವರೆಗೆ ಸ್ಥಳ ಪಂಚನಾಮೆ ಮಾಡಿ ಒಂದು ಮಹಜರ್ ನ್ನು ತಯಾರಿಸಿರುತ್ತೇನೆ. ಸ್ಥಳ ಪಂಚನಾಮೆಯ ಕಾಲಕ್ಕೆ ಚಾಸಾ-2 ರವರು ಹಾಜರುಪಡಿಸಿದ ಒಂದು ಕೂಡುಗೋಲು ಹಾಗೂ ಒಂದು ತೆಂಗಿನ ಪೊರಕೆಯನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ಸಾಗಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನಮ್ಮ ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಆದೇ ದಿನ ಚಾಸಾ-2 ರಿಂದ ಚಾಸಾ-5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕ.25.07.2014ರಂದು ರಾಮನಗರದ ಸರ್ಕಾರಿ ಆಸ್ಪತ್ರೆಯಿಂದ ಚಾಸಾ-2 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ಚಾಸಾ-6 ರವರಿಂದ ಪಡೆದುಕೊಂಡು ಕಡತಕ್ಕೆ ಸೇರಿಸಿಕೊಂಡಿರುತ್ತೇನೆ.

ಆದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ದ ಆಪರಾದ ಸಾಬೀತಾದ ಕಾರಣಕ್ಕೆ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಕಡತದಲ್ಲಿರುವ ಒಂದು ದಾಖಲೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ದಾಖಲೆಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2(**ಸಿ**)** ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ಚಾಸಾ-**2** ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರವನ್ನು ನಿಪಿ-**3** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು.

ನಿಪಿ-**2**ರಡಿಯಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ- ಆರೋಪಿತರ ಪರ ವಕೀಲರಿಂದಃ-</u>

ಸರ್ವೆ ನಂ.**268**ಕ್ಕೆ ಸಂಬಂಧಿಸಿದಂತೆ ಹಲವಾರು ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳು ಚಾಲ್ತಿಯಲ್ಲಿರುತ್ತವೆ ಎಂದರೆ ಸಾಕ್ಷಿಯು ಕೇಸ್ ಮತ್ತು ಕೌಂಟರ್ ಕೇಸು ಇರುವ ಬಗ್ಗೆ ನನಗೆ ಗೊತ್ತು, ಆದರೆ ಸಿವಿಲ್ ಕೇಸುಗಳು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.**268**ರ ಜಮೀನು ಕರಿಯಪ್ಪ ರವರಿಗೆ ಸಂಬಂಧಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.**268**ರ ಮಾಲೀಕರ ಬಗ್ಗೆ ತನಿಖಾ ಕಾಲದಲ್ಲಿ ನಾನು ವಿಚಾರಿಸಿರುತ್ತೇನೆ. ದೂರಿನ ಆಧಾರದ ಮೇಲೆ ನಾನು ತನಿಖೆ ಮಾಡಿರುತ್ತೇನೆ ಎಂದರೆ ಸರಿ.

ಸರ್ವೆ ನಂ.**268**ರಲ್ಲಿ ಆರೋಪಿತರು ದನ ಮೇಯಿಸುತ್ತಿದ್ದರೆ ವಿನಃ ಸರ್ವೆ ನಂ.**267**ರಲ್ಲಿ ಅವರು ಧನ ಮೇಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ-**2**ರಡಿಯಲ್ಲಿ ಅಮಾನತ್ತುಪಡಿಸಿಕೊಂಡಂತಹ ಕೂಡ್ಲು ಮತ್ತು ತೆಂಗಿನ ಪೊರಕೆ ಸಾಮಾನ್ಯವಾಗಿ ಎಲ್ಲ ಕಡೆ ದೊರಕುತ್ತವೆ ಎಂದರೆ ಸರಿ. ಚಾಸಾ-**2** ರವರಿಗೆ ಯಾವುದೇ ಏಟು ಆಗದೆ ಇದ್ದರು ಅವರಿಗೆ ಸಹಾಯ ಮಾಡಲು ಚಾಸಾ-**6** ರವರೊಂದಿಗೆ ಶ್ಯಾಮಿಲಾಗಿ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕಾಗಿಯೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿತರು ಯಾವುದೇ ಆಪರಾಧ ಮಾಡಿಲ್ಲ ಎಂಬ ಸಂಗತಿಯು ಸಾಬೀತಾಗಿದ್ದರೂ ಸಹ ಚಾಸಾ-**2** ರವರಿಗೆ ಸಹಾಯ ಮಾಡಲು ಅವರ ವಿರುದ್ದ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**